


ಜೀಪೊಂದು ಕರ್ಕಶವಾಗಿ ಸದ್ದು ಮಾಡುತ್ತಾ ತನ್ನ ಎದೆಯ ಮೇಲೆ ಹರಿದು ಹೋದಂತೆ, ಹಂದಿಯೊಂದು ‘ಕರ್ರ್ರೋ’ ಎಂದು ವಿಕಾರವಾಗಿ ಕಿರುಚಿದಂತೆ ಅನ್ನಿಸಿ, ಗಾಢನಿದ್ದೆಯಲ್ಲಿದ್ದ ದುಮ್ಮನಿಗೆ ಗಕ್ಕನೆ ಎಚ್ಚರವಾಯಿತು.

‘ಕ್ರೀಂ.. ಕ್ರೀಂ.. ಕಿಟ್..’

ಗುಡ್ಲನ್ನು ಸುತ್ತುವರಿದಿದ್ದ ಕಾಡಿನಲ್ಲಿ ರಾತ್ರಿಯ ಕೀಟಗಳ ಶಬ್ದ ಕೇಳಿ ತಾನು ಎಂದಿಗಿಂತ ಬಹಳ ಬೇಗನೆ ಎದ್ದಿರುವ ಅರಿವಾಯಿತು.

ಒಂದ ಮಾಡಿ ಬಂದು ಕೋಳಿ ಕೂಗುವವರೆಗೂ ಇನ್ನಷ್ಟು ಹೊತ್ತು ಮಲಗುವಾ ಎಂದುಕೊಳ್ಳುತ್ತಾ ನಿದ್ದೆಗಣ್ಣಿನಲ್ಲೇ ಎದ್ದು ತಡಿಕೆಯ ಬಾಗಿಲಿನ ಹಗ್ಗ ಸಡಿಲಿಸಿ ಹೊರಕ್ಕೆ ನೂಕಿದ. ಅದು ತೆರೆದುಕೊಳ್ಳಲಿಲ್ಲ.

ಚೌಡಿ ಬನಕ್ಕೆ ಹೋಗುವ ಮಣ್ಣು ರಸ್ತೆಯ ತಿರುವಿನಲ್ಲೇ ಇರುವ ಅವನ ನರಕೆ ಗುಡ್ಲಿನ ಮುಂದೆ ಜನರ ತಗ್ಗಿದ ದನಿಯ ಗುಜುಗುಜು ಮಾತು, ಅದರ ಹಿಂದೆಯೇ ಹಂದಿಗಳ ಕಿರುಚಾಟ, ಬೈಕು, ಜೀಪು ಗುಡ್ಲಿನ ಮುಂದೆಯೇ ತಿರುವಿನಲ್ಲಿ ಬ್ರೇಕ್ ಒತ್ತಿ ಹೊರಳಿ ನಂತರ ವೇಗ ಹೆಚ್ಚಿಸಿಕೊಳ್ಳುತ್ತಿದ್ದುದು, ಎಲ್ಲದರ ಅರಿವಾಗಿ ಅವನು ಸಂಪೂರ್ಣ ಎಚ್ಚರಗೊಂಡ.